ಅದೊಂದು ದಿನ ಭಾನುವಾರ. ಶೂಟಿಂಗ್ ಇಲ್ಲ. ನಿಧಾನವಾಗಿ ಏಳೋಣ ಎಂದು ಮಲಗಿದ್ದೆ. ಫೋನ್ ರಿಂಗಣಿಸಿತು. ಮ್ಯಾನೇಜರ್ ಸೀನಣ್ಣ. 'ಎಲ್ಲಿದ್ದೀಯಾ?' ಎಂದ.

'ರೂಮ್‌ನಲ್ಲಿದ್ದೇನೆ' ಎಂದೆ.

'ನಿಮ್ಮ ಬಾಸ್ ರಮಾನಾಥ್ ಹೋಗಿಬಿಟ್ಟರಂತೆ' ಎಂದ.

ಆ ಮಾತುಗಳು ಅನಿರೀಕ್ಷಿತವಾಗಿ ನನ್ನ ಕಿವಿಗಳಿಗೆ ಅಪ್ಪಳಿಸಿದವು. ನಂಬಲಸಾಧ್ಯವಾದ ಒಂದು ವಿಷಯ ಮರುಕ್ಷಣದಲ್ಲಿಯೇ ವಾಸ್ತವವಾಯಿತು.

'ಹೌದಾ' ಎಂದೆ.

'ಅವರು ಮನೆಯಲ್ಲಿ ಸೂಯಿಸೈಡ್ ಮಾಡಿಕೊಂಡಿದ್ದಾರಂತೆ. ಬೇಗ ಬಾ' ಎಂದ.

ಇದು ಮತ್ತೂ ನಂಬಲು ಸಾಧ್ಯವಾಗದ ವಿಷಯ. ಅವರು ಎಂದಿಗೂ ತಮ್ಮ ಜೊತೆಯಲ್ಲಿರುವವರಿಗೆ ಉತ್ಸಾಹ ತುಂಬುತ್ತಿದ್ದರೇ ಹೊರತು ಯಾರಿಗೂ ನೋವು ಕೊಡುತ್ತಿರಲಿಲ್ಲ. ಸ್ವತಃ ಕೌಟುಂಬಿಕ ಸಂಕಷ್ಟಗಳಿದ್ದರೂ ಅವು ಗೊತ್ತಾಗದಂತೆ ಇರುತ್ತಿದ್ದರು. ವ್ಯಕ್ತಿತ್ವ ವಿಕಸನದ ಪಾಠಗಳೇ ವ್ಯಕ್ತಿಯಾದಂತೆ ಇದ್ದ ರಮಾನಾಥರು...

ಅವರ ಮನೆಗೆ ಆಟೊ ಹಿಡಿದು ಧಾವಿಸಿದೆ.

ಅಷ್ಟು ಹೊತ್ತಿಗೆ ಪೊಲೀಸರು, ರಮಾನಾಥರ ಮಕ್ಕಳು ಎಲ್ಲರೂ ನೆರೆದಿದ್ದರು. ಮಹಜರು ಮುಗಿಸಿ ದೇಹವನ್ನು ಪೋಸ್ಟ್ ಮಾರ್ಟಂಗೆ ಹೊತ್ತೊಯ್ಯುತ್ತಿದ್ದರು. ಹೀಗೇಕೆ ಮಾಡಿದಿರಿ? ಪ್ರಶ್ನೆ ಕೇಳಲು ವ್ಯಕ್ತಿ ಬದುಕಿಲ್ಲ. ನಾನು ಅವರ ಅಸಿಸ್ಟೆಂಟ್ ಎನ್ನಿಸಿಕೊಳ್ಳಲು ನಾಲಾಯಕ್. ಅವರು ಹೀಗೆ ಮಾಡಿಕೊಳ್ಳಬಹುದು ಎಂಬ ಕಿಂಚಿತ್ತು ಅನುಮಾನ ಬಂದಿದ್ದರೂ ನಾನು ಅವರ ಮನೆಯಲ್ಲಿಯೇ ಉಳಿಯುತ್ತಿದ್ದನಲ್ಲ ಎಂದು ನನ್ನನ್ನು ನಾನು ಬೈದುಕೊಂಡೆ.

ನಿರ್ಜೀವವಾಗಿ ಮಲಗಿದ್ದ ಚಿತ್ರರಂಗವನ್ನು ಒಂದೊಮ್ಮೆ ತನ್ನ ವರ್ಚಸ್ಸಿನಿಂದ ಆಳಿದ್ದ, ಈಗ ಹಿರಿಯ ನಟ ಎನಿಸಿಕೊಂಡಿರುವ ರಮಾನಾಥ್ ಅವರು ಆತ್ಮಹತ್ಯೆ ಮಾಡಿಕೊಂಡಿದ್ದರು. ಅದು ಚಿತ್ರರಂಗದ ಇತಿಹಾಸದ ಪುಟವಾಗಿ ಬಿಟ್ಟಿತು.

ಪೊಲೀಸರು ವಿಚಾರಣೆಗೆ ಕರೆದರು. ಅಲ್ಲಿ ನೆರೆದಿದ್ದವರೆಲ್ಲರೂ ಅವರ ಸಹಾಯಕನಾಗಿದ್ದ ನನ್ನನ್ನು ಹಲವು ಪ್ರಶ್ನೆಗಳನ್ನು ಕೇಳಲು ಉತ್ಸುಕರಾಗಿದ್ದರು. ಅಸಲಿಗೆ ರಮಾನಾಥರು ನನಗೇ ಉತ್ತರವಿಲ್ಲದ ಪ್ರಶ್ನೆ ಎಸೆದು ಹೋಗಿದ್ದರು. ನಾನು ಯಾರ ಪ್ರಶ್ನೆಗೆ ಉತ್ತರಿಸಲಿ? ರಮಾನಾಥರಂಥ ಜೀವನಪ್ರೀತಿಯ ವ್ಯಕ್ತಿ ಆತ್ಮಹತ್ಯೆ ಮಾಡಿಕೊಳ್ಳಲು ಸಾಧ್ಯವೇ ಇಲ್ಲ. ಅವರು ಮಾಡಿಕೊಂಡಿದ್ದು ನಿಜವೇ ಆಗಿದ್ದಲ್ಲಿ ಅದಕ್ಕೆ ಕಾರಣಗಳನ್ನು ನಾನು ಹೇಗೆ ಹೇಳಬಲ್ಲೆ. ನಾನು ನನ್ನ ತಾಯಿಯೊಂದಿಗೆ ಒರಟಾಗಿ ಫೋನ್‌ನಲ್ಲಿ ಮಾತನಾಡಿದರೆ ಅವರು ಸಮಾಧಾನ ಹೇಳುತ್ತಿದ್ದರು. ಚಿಕ್ಕ ವಯಸ್ಸಿನಲ್ಲೇ ತಂದೆಯನ್ನು ಕಳೆದುಕೊಂಡಿದ್ದ ನನಗೆ ತಂದೆಯ ಕೊರತೆಯನ್ನು ಅವರು ನೀಗಿದ್ದರು. ವಾಸ್ತವವಾಗಿ ಅವರ ಪತ್ನಿ ಮರಣಿಸಿದ ನಂತರ ನನಗೆ ಅವರ ಜೊತೆಯಲ್ಲಿಯೇ ಇರಲು ಸೂಚಿಸಿದ್ದರು. ಆದರೆ ನಾನು ಸಂಕೋಚ ಪಟ್ಟೆ. ಅವರ ಜೊತೆಯಲ್ಲಿದ್ದರೆ ಅವರನ್ನು ಉಳಿಸಿಕೊಳ್ಳುವ ಅವಕಾಶವಾದರೂ ದೊರೆಯುತ್ತಿತ್ತೇನೋ!

ಭವಿಷ್ಯವನ್ನು ಯಾರೂ ಊಹಿಸಲಾರರು. ರಮಾನಾಥರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ ಎಂದು ಗೊತ್ತಿದ್ದರೆ ನಾನು ಅವರ ಜೊತೆಯಲ್ಲಿಯೇ ಇರುತ್ತಿದ್ದೆ ಎಂದುಕೊಳ್ಳುತ್ತಿದ್ದೆ. ವಾಸ್ತವವಾಗಿ ನಾನು ಅವರೊಂದಿಗೆ ಇದ್ದೆನೇ ಹೊರತು ನಾನು ಅವರಿಂದ ದೂರವಾಗಿ ಚಿತ್ರೋದ್ಯಮದಲ್ಲಿ ಸ್ವತಂತ್ರವಾಗಿ ನೆಲೆ ನಿಲ್ಲಲು ಯೋಚಿಸಿದ್ದೆ. ರಮಾನಾಥರಿಗೆ ಎಲ್ಲ ಪ್ರಮುಖ ನಿರ್ದೇಶಕರೂ ಪರಿಚಯವಿದ್ದರು. ಅವರು ಎಂದಿಗೂ ನನ್ನನ್ನು ಅವರಿಗೆ ಪರಿಚಯಿಸಲಿಲ್ಲ ಎಂದು ನನಗೆ ಅಸಮಾಧಾನ ಇತ್ತು. ಅನಿವಾರ್ಯತೆಗೆ